# ವ್ಯವಹಾರ ಅಧ್ಯಯನ

## ಅಧ್ಯಾಯ-1
## ಬ್ಯಾಂಕು ವ್ಯವಹಾರಗಳು

**I ಖಾಲಿ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ**

1. ಬ್ಯಾಂಕ್ ಎಂಬ ಪದವು ಫ್ರೆಂಚಿನ **'ಬ್ಯಾಂಕ್'** ಎಂಬ ಶಬ್ದಗಳಿಂದ ಬಂದಿದೆ.
2. ಬ್ಯಾಂಕ್‌ಗಳ ಬ್ಯಾಂಕ್ **ಭಾರತೀಯ ರಿಸರ್ವ್ ಬ್ಯಾಂಕ್** (ಆರ್.ಬಿ.ಐ) ಆಗಿದೆ
3. ರಾಷ್ಟ್ರೀಯ ಉಳಿತಾಯ ಪತ್ರಗಳನ್ನು **ಅಂಚೆ ಇಲಾಖೆ** ನೀಡುತ್ತದೆ
4. ರಾಷ್ಟ್ರೀಕೃತ ಬ್ಯಾಂಕಿಗೆ ಒಂದು ಉದಾಹರಣೆ **ಕೆನರಾ ಬ್ಯಾಂಕ್**
5. ಬ್ಯಾಂಕಿನಲ್ಲಿ ದಿನಕ್ಕೆ ಎಷ್ಟು ಬಾರಿಯಾದರೂ ವ್ಯವಹರಿಸಬಹುದಾದ ಖಾತೆ **ಚಾಲ್ತಿ ಖಾತೆ**
6. ಠೇವಣಿಯನ್ನು ನಿಗಧಿತ ಅವಧಿಗೆ ಇಡಬಹುದಾದ ಖಾತೆ **ನಿಶ್ಚಿತ ಠೇವಣಿ ಖಾತೆ**

**II ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ**

1. ಬ್ಯಾಂಕ್ ಎಂದರೇನು?
   ಬ್ಯಾಂಕು ಎನ್ನುವುದು ಒಂದು ಹಣಕಾಸಿನ ಸಂಸ್ಥೆಯಾಗಿದೆ.
2. ಬ್ಯಾಂಕಿಂಗ್ ವ್ಯವಹಾರ ಎಂದರೇನು?
   ಯಾವುದೇ ಒಂದು ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದ ಲೆಕ್ಕಗಳನ್ನು ಬ್ಯಾಂಕ್ ವ್ಯವಹಾರ ಎನ್ನುತ್ತೇವೆ.
3. "ಕೃಷ್ಣನು ಭವಿಷ್ಯದಲ್ಲಿ ತನ್ನ ಮಗಳ ಮದುವೆಗೆ ಈಗಿನಿಂದಲೇ ಹಣ ಉಳಿತಾಯ ಮಾಡಬೇಕು". ಯಾವ ವಿಧದ ಬ್ಯಾಂಕ್ ಖಾತೆ ಉತ್ತಮ?
   ಆವರ್ತ ಠೇವಣಿ ಖಾತೆ

**III ಮೂರು ಅಂಕದ ಪ್ರಶ್ನೋತ್ತರಗಳು**

1. ಬ್ಯಾಂಕುಗಳ ಕಾರ್ಯಗಳನ್ನು ಬರೆಯಿರಿ
   - ಸಾರ್ವಜನಿಕರಿಂದ ಠೇವಣಿಗಳನ್ನು ಅಂಗೀಕರಿಸುವುದು
   - ಸಾರ್ವಜನಿಕರಿಗೆ ಸಾಲಗಳನ್ನು ವಿತರಿಸುವುದು
   - ಹಣವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸುವುದು.
   - ಹುಂಡಿಗಳನ್ನು ಸೋಡಿ ಮಾಡುವುದು.
   - ಭದ್ರತಾ ಕಪಾಟುಗಳನ್ನು ಬಾಡಿಗೆಗೆ ಕೊಡುವುದು.
   - ವಿದೇಶಿ-ವಿನಿಮಯದ ವ್ಯವಹಾರಗಳನ್ನು ನಿರ್ವಹಿಸುವುದು.
   - ಸರ್ಕಾರದ ಹಣಕಾಸಿನ ವ್ಯವಹಾರಗಳನ್ನು ನಿರ್ವಹಿಸುವುದು.
2. ಬ್ಯಾಂಕುಗಳು ಸಲ್ಲಿಸುವ ಸೇವೆಗಳಾವುವು?
   - ಜಮಾ ಕಾರ್ಡ್‌ಗಳನ್ನು ಕೊಡುವುದು.
   - ಖಾಸಗಿ ಸಾಲಗಳು
   - ಮನೆ ಕಟ್ಟಲು/ವಾಹನ ಖರೀದಿಸಲು ಸಾಲ ಕೊಡುವುದು.
   - ಪರಸ್ಪರ ನಿಧಿಗಳನ್ನು ನಿರ್ವಹಿಸುವುದು
   - ವ್ಯಾಪಾರಕ್ಕೆ ಬೇಕಾದ ಸಾಲಗಳು ಹಾಗೂ ಭದ್ರತಾ ಕಪಾಟುಗಳನ್ನು ಕೊಡುವುದು.
   - ಭರವಸೆಯ ಸೇವೆಗಳು
   - ಸಹಿಗಳಿಗೆ ಜವಾಬ್ದಾರಿ ಹಾಕುವುದು.
3. ಬ್ಯಾಂಕಿನ ಅನುಕೂಲಗಳು/ಬ್ಯಾಂಕ್ ಖಾತೆ ತೆರೆಯುವುದರ ಪ್ರಾಮುಖ್ಯತೆ ಏನು?
   - ಬ್ಯಾಂಕ್ ಖಾತೆಯು ಹಣದ ಭದ್ರತೆ ಕಾಪಾಡುತ್ತದೆ.

- ಬ್ಯಾಂಕ್ ಖಾತೆಯು ಹಣದ ಪಾವತಿಗಳನ್ನು ಮಾಡಲು ಸಹಾಯ ಮಾಡುತ್ತದೆ.
- ಬ್ಯಾಂಕ್ ಖಾತೆಯು ಸಾಲವನ್ನು ವಸೂಲು ಮಾಡಲು ಸಹಾಯ ಮಾಡುತ್ತದೆ.
- ಬ್ಯಾಂಕ್ ಖಾತೆಯಿಂದ ಸಾಲ ಪಡೆಯಲು ಸಾಧ್ಯವಾಗುತ್ತದೆ.
- ಬ್ಯಾಂಕ್ ಖಾತೆಯು ವ್ಯವಹಾರಗಳನ್ನು ಸುಗಮವಾಗಿ ನಡೆಸಲು ಸಾಧ್ಯವಾಗುತ್ತದೆ.
- ಬ್ಯಾಂಕ್ ಖಾತೆದಾರರು ಭದ್ರತಾ ಕಪಾಟುಗಳನ್ನು ಪಡೆಯಬಹುದು.

4. ಬ್ಯಾಂಕ್‌ಖಾತೆಯನ್ನು ಬ್ಯಾಂಕಿನಲ್ಲಿ ತೆರೆಯಲು ಯಾವ ಹಂತಗಳನ್ನು ಅನುಸರಿಸಬೇಕು / ಬ್ಯಾಂಕ್‌ಖಾತೆ ತೆರೆಯುವ ಹಂತಗಳು ಯಾವುವು?
    - ಯಾವ ವಿಧವಾದ ಬ್ಯಾಂಕ್ ಖಾತೆಯನ್ನು ತೆಗೆಯಬೇಕೆಂಬುದನ್ನು ನಿರ್ಧರಿಸುವುದು.
    - ನಿಮಗೆ ಅನುಕೂಲವಾದ ಬ್ಯಾಂಕಿಗೆ ತೆರಳಿ ಅಧಿಕಾರಿಯನ್ನು ಸಂಪರ್ಕಿಸುವುದು.
    - ಪ್ರಸ್ತಾವನೆ ಅರ್ಜಿ ನಮೂನೆಯನ್ನು ತುಂಬುವುದು.
    - ಪರಿಚಿತರ ಉಲ್ಲೇಖವನ್ನು ಕೊಡುವುದು.
    - ಬ್ಯಾಂಕ್ ಖಾತೆಯನ್ನು ತೆಗೆಯುವ ನಮೂನೆಯನ್ನು ಬ್ಯಾಂಕಿಗೆ ಒಪ್ಪಿಸುವುದು.
    - ಅಧಿಕಾರಿಯ ಒಪ್ಪಿಗೆ
    - ಪ್ರಾರಂಭಿಕ ಠೇವಣಿ– ಇಡುವುದು.
5. ಬ್ಯಾಂಕುಗಳ ವಿಧಗಳನ್ನು ಪಟ್ಟಿ ಮಾಡಿ?
    - ಭಾರತೀಯ ರಿಜರ್ವ್ ಬ್ಯಾಂಕ್ (ಆರ್.ಬಿ.ಐ)
    - ವಾಣಿಜ್ಯ ಬ್ಯಾಂಕ್‌ಗಳು
    - ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್ ಗಳು
    - ಭೂ ಅಭಿವೃದ್ಧಿ ಬ್ಯಾಂಕ್‌ಗಳು
    - ಸ್ಥಳೀಯ ಬ್ಯಾಂಕ್‌ಗಳು
    - ಸಹಕಾರಿ ಬ್ಯಾಂಕ್‌ಗಳು
6. ಬ್ಯಾಂಕಿನಲ್ಲಿ ತೆರೆಯಬಹುದಾದ ಪ್ರಮುಖ ಖಾತೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
    ಬ್ಯಾಂಕ್‌ಗಳಲ್ಲಿ ಸಾಮಾನ್ಯವಾಗಿ 4 ವಿಧದ ಖಾತೆಗಳನ್ನು ತೆರೆಯಬಹುದು.
    **ಉಳಿತಾಯ ಖಾತೆ** : ವೇತನದಾರರು, ವಿದ್ಯಾರ್ಥಿಗಳು, ಹಿರಿಯ ನಾಗರಿಕರು, ಪಿಂಚಣಿದಾರರು ಮೊದಲಾದವರು ಈ ಖಾತೆ ತೆರೆಯಬಹುದು. ಬಡ್ಡಿಯು ದೊರೆಯುತ್ತದೆ.
    **ಚಾಲ್ತಿಖಾತೆ** : ಈ ಖಾತೆಯನ್ನು ವ್ಯಾಪಾರಸ್ಥರು, ವಾಣಿಜ್ಯ ಮತ್ತು ಔದ್ಯೋಗಿಕ ಸಂಸ್ಥೆಯವರು ತೆರೆಯುತ್ತಾರೆ. ಈ ಖಾತೆಯಲ್ಲಿ ದಿನಕ್ಕೆ ಎಷ್ಟು ಬಾರಿಯಾದರೂ ಹಣ ತುಂಬಬಹುದು ಮತ್ತು ತೆಗೆಯಬಹುದು.
    **ಆವರ್ತಠೇವಣಿ ಖಾತೆ** : ಆವರ್ತ ಠೇವಣಿ ಖಾತೆಗಳನ್ನು ಸಾಮಾನ್ಯವಾಗಿ ಭವಿಷ್ಯದ ಕಾಲದಲ್ಲಿ ಯಾವುದಾದರೂ ಒಂದು ನಿಗದಿತ ದಿನದಂದು ಹಿಂದಕ್ಕೆ ಪಡೆಯಲು ತೆರೆಯಲ್ಪಡುತ್ತದೆ. ತಿಂಗಳು ತಿಂಗಳು ವ್ಯವಸ್ಥಿತವಾಗಿ ಠೇವಣಿಗಳನ್ನು ಒಂದು ಅವಧಿಗೆ ಜಮಾ ಮಾಡುತ್ತಾರೆ.
    **ನಿಶ್ಚಿತ ಠೇವಣಿ ಖಾತೆ** : ಈ ಖಾತೆಯಲ್ಲಿ ಠೇವಣಿಯನ್ನು ಒಂದು ನಿಗಧಿತ ಅವಧಿಗೆ ಇಡಲಾಗುತ್ತದೆ. ಠೇವಣಿ ಹಣವನ್ನು ನಿಶ್ಚಿತ ಅವಧಿ ಮುಗಿದ ನಂತರ ಠೇವಣಿದಾರರಿಗೆ ಪಾವತಿ ಮಾಡಲಾಗುತ್ತದೆ.
7. ಬ್ಯಾಂಕಿನ ಗುಣ ಲಕ್ಷಣಗಳನ್ನು ಪಟ್ಟಿ ಮಾಡಿ
    - ಹಣದ ವಹಿವಾಟು
    - ಠೇವಣಿಗಳನ್ನು ಅಂಗೀಕರಿಸುತ್ತದೆ
    - ಸಾಲಗಳನ್ನು ನೀಡುವುದು
    - ಏಜೆನ್ಸಿ ಸೇವೆಗಳು

- ಲಾಭ ಮತ್ತು ಸೇವಾ ಭರವಸೆ
- ಬ್ಯಾಂಕಿಂಗ್ ವ್ಯವಹಾರ
- ಹೆಸರಿನ ಗುರುತು

8. 'ಅಂಚೆ ಕಛೇರಿಗಳು ಅನೇಕ ಹಣಕಾಸಿನ ವ್ಯವಹಾರಗಳನ್ನು ಸಹ ಕೈಗೊಳ್ಳುತ್ತಿವೆ' ಸಮರ್ಥಿಸಿ
   ಅಂಚೆ ಕಛೇರಿಗಳು ಅನೇಕ ಹಣಕಾಸಿನ ವ್ಯವಹಾರಗಳನ್ನು ಸಹ ಕೈಗೊಳ್ಳುತ್ತಿವೆ ಎಂಬುದನ್ನು ಈ ಕೆಳಗಿನಂತೆ ಸಮರ್ಥಿಸಬಹುದಾಗಿದೆ
   - ಅಂಚೆ ಕಛೇರಿಗಳು ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ನೀಡುತ್ತವೆ
   - ಕಿಸಾನ್ ವಿಕಾಸ ಪತ್ರಗಳನ್ನು ನೀಡುತ್ತವೆ
   - ಮಾಸಿಕ ಆವರ್ತ ಠೇವಣಿ ಖಾತೆಗಳನ್ನು ಒದಗಿಸುತ್ತವೆ
   - ಅಂಚೆ ಉಳಿತಾಯ ಖಾತೆಗಳನ್ನು ನಿರ್ವಹಿಸುತ್ತವೆ
   - ವಿವಿಧ ನಿವೃತ್ತಿ ವೇತನಗಳನ್ನು ಪಾವತಿ ಮಾಡುವುದು
   - ಹಣ ವರ್ಗಾವಣೆಯನ್ನು ಮಾಡುತ್ತವೆ
   - ಅಂಚೆ ಜೀವ ವಿಮೆ ಸೇವೆಗಳನ್ನು ನೀಡುತ್ತವೆ
9. ಬ್ಯಾಂಕು ಮತ್ತು ಗ್ರಾಹಕರಿಗೂ ಇರುವ ಸಂಬಂಧವನ್ನು ತಿಳಿಸಿ
   ಬ್ಯಾಂಕು ಮತ್ತು ಗ್ರಾಹಕರಿಗೂ ಇರುವ ಸಂಬಂಧವನ್ನು ಎರಡು ರೀತಿಯಲ್ಲಿ ವಿವರಿಸಬಹುದು
   **ಸಾಮಾನ್ಯ ಸಂಬಂಧ :** ಈ ಕೆಳಗಿನ ಅಂಶಗಳನ್ನು ಒಳಗೊಂಡಿದೆ
   - ಪ್ರಾಥಮಿಕ ಸಂಬಂದ
   - ಸಹಾಯಕ ಅಥವಾ ಉಪಕಾರ ಸಂಬಂಧ
   - ಕಾರಬಾರಿ ಮತ್ತು ಮುಖ್ಯಸ್ಥನ ಸಂಬಂದ

   **ವಿಶೇಷ ಸಂಬಂಧ :** ಇದು ಈ ಕೆಳಗಿನ ಅಂಶಗಳನ್ನು ಒಳಗೊಂಡಿದೆ
   - ಚೆಕ್ಕುಗಳನ್ನು ಮನ್ನಣೆ ಮಾಡುವುದು
   - ಗ್ರಾಹಕನ ಲೆಕ್ಕಗಳ ಗೌಪ್ಯತೆ ಕಾಪಾಡುವುದು

## ಅಧ್ಯಾಯ-2
## ಉದ್ಯಮಗಾರಿಕೆ

**I ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ**

1. 'ಅಪೋಲೋ' ಆಸ್ಪತ್ರೆಗಳನ್ನು ಪ್ರಾರಂಭಿಸಿದವರು ಯಾರು?
   ಡಾ, ಪ್ರತಾಪ್‌ರೆಡ್ಡಿ
2. ಜೆಟ್ ವಾಯುಮಾರ್ಗಗಳನ್ನು ಹುಟ್ಟು ಹಾಕಿದವರು ಯಾರು?
   ನರೇಶ್ ಗೊಯಲ್
3. ಬಿಳಿಕ್ರಾಂತಿಯ ಪಿತಾಮಹ ಎಂದು ಯಾರನ್ನು ಕರೆಯಲಾಗಿದೆ?
   ವರ್ಗೀಸ್ ಕುರಿಯನ್
4. ಭಾರತದಲ್ಲಿ ಇನ್‌ಫೋಸಿಸ್ ತಂತ್ರಜ್ಞಾನ ನಿಗಮ ಪ್ರಾರಂಭಿಸಿದವರು ಯಾರು?
   ನಾರಾಯಣ ಮೂರ್ತಿ

5. 'ರಿಲಾಯನ್ಸ್" ನ ಸ್ಥಾಪಕರು ಯಾರು?
   ಧೀರೂಬಾಯಿ ಅಂಬಾನಿ
6. ವಿಪ್ರೋ ತಂತ್ರಜ್ಞಾನ ಸಂಸ್ಥೆಯ ಅಧ್ಯಕ್ಷರು ಯಾರು?
   ಅಜೀಂ ಪ್ರೇಮ್‌ಜಿ
7. 2001 ರಲ್ಲಿ ವರ್ಷದ ಶ್ರೇಷ್ಠ ಉದ್ಯಮಿ ಪ್ರಶಸ್ತಿ ಪಡೆದವರು ಯಾರು?
   ಏಕ್ತಾ ಕಪೂರ್
8. ಬಯೋಕಾನ್ ನಿಗಮದ ಸ್ಥಾಪಕರು ಯಾರು?
   ಕಿರಣ್ ಮುಜುಮ್‌ದಾರ್ ಷಾ
9. ಉದ್ಯಮಿ ಎಂಬ ಪದವು ಯಾವ ಭಾಷೆಯ ಯಾವ ಪದದಿಂದ ಬಂದಿದೆ?
   ಫ್ರೆಂಚ್ ಭಾಷೆಯ 'ಎಂಟ್ರ ಫ್ರೆಂಡೆ'
10. ಉದ್ಯಮಿ ಎಂದರೆ ಯಾರು?
   ಒಂದು ಆರ್ಥಿಕ ಚಟುವಟಿಕೆಯನ್ನು ಕೈಗೆತ್ತಿಕೊಳ್ಳುವವರೇ ಉದ್ಯಮಿ
11. ಉದ್ಯಮಗಾರಿಕೆ ಎಂದರೇನು?
   ಒಬ್ಬ ಉದ್ಯಮಿಯು ತನ್ನ ಉದ್ದಿಮೆಯನ್ನು ಸ್ಥಾಪಿಸಲು ಕೈಗೊಳ್ಳುವ ಕ್ರಿಯೆಗಳೇ ಉದ್ಯಮಗಾರಿಕೆ
12. ಜಿಲ್ಲಾ ಕೈಗಾರಿಕಾ ಕೇಂದ್ರ ಸ್ಥಾಪನೆಯಾದ ವರ್ಷ ಯಾವುದು?
   ಕ್ರಿ.ಶ.1978 ರಲ್ಲಿ
13. ಜಿಲ್ಲಾ ಕೈಗಾರಿಕಾ ಕೇಂದ್ರ ಸ್ಥಾಪನೆಯ ಉದ್ದೇಶವೇನು?
    - ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವುದು
    - ಗ್ರಾಮಾಂತರ ಕೈಗಾರಿಕೆಗಳ ಆಡಳಿತ ಮತ್ತು ಸಮಗ್ರತೆಯನ್ನು ಕೇಂದ್ರಿಕರಿಸುವುದು
14. ಒಬ್ಬ ವ್ಯಕ್ತಿ ಒಂದು ಉದ್ದಿಮೆ ಸ್ಥಾಪಿಸಲು ಇರುವ ಯಾವುದಾದರೂ ಎರಡು ಕ್ಷೇತ್ರಗಳು
    - ಜಾಹಿರಾತು ಸೇವಾ ಸಂಸ್ಥೆಗಳು
    - ಫೋಟೋ ತೆಗೆಯುವ ಕೇಂದ್ರಗಳು
15. ಉದ್ಯಮಗಾರಿಕೆಗೆ ಸಾಲ ನೀಡುವ 2 ಸಂಸ್ಥೆಗಳನ್ನು ಹೆಸರಿಸಿ.
    - ಭಾರತದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು
    - ಆಮದು-ರಫ್ತು ಬ್ಯಾಂಕ್ (ಎಕ್ಸಿಂ ಬ್ಯಾಂಕ್)
    - ನಬಾರ್ಡ್
    - ರಾಜ್ಯ ಹಣಕಾಸು ನಿಗಮ.
16. ಉದ್ಯಮಿಗಳ ಎರಡು ಪ್ರವರ್ತಕ ಸಂಸ್ಥೆಗಳನ್ನು ಹೆಸರಿಸಿ.
    - ಜಿಲ್ಲಾ ಕೈಗಾರಿಕೆ ಕೇಂದ್ರಗಳು
    - ಕೈಗಾರಿಕಾ ಪ್ರದೇಶಗಳು
17. ದೂರದರ್ಶನ ಕ್ಷೇತ್ರದಲ್ಲಿ ಅಧಿಪತ್ಯ ಸಾಧಿಸಿದ ರಾಣಿ ಎಂದು ಯಾರನ್ನು ಕರೆಯಲಾಗುತ್ತದೆ?
   ಏಕ್ತಾ ಕಪೂರ್
18. ಉದ್ಯಮಗಾರಿಕೆಯು ಸಾಹಸ ಕಾರ್ಯವಾಗಿದೆ. ಹೇಗೆ?
   ಉದ್ಯಮಗಾರಿಕೆಯು ಒಂದು ಸಾಹಸ ಚಟುವಟಿಕೆಯಾಗಿದೆ, ಇದು ಎನೂ ಇಲ್ಲದುದನ್ನು ಏನಾದರೊಂದಾಗಿ ಸೃಜಿಸುವ ಕಾರ್ಯವಾಗಿದೆ, ಇದು ಬೆರೆಯವರಿಂದ ಕಷ್ಟಸಾದ್ಯವಾದ, ಗೊಂದಲಮಯ, ವಿರೋಧಾತ್ಮಕ ಮತ್ತು ಅಸ್ತವ್ಯಸ್ತತೆಯಿಂದ ಕೂಡಿದ ಒಂದು ಅವಕಶವನ್ನು ಗುರ್ತಿಸಿ ಅದನ್ನು ಕಾರ್ಯರೂಪಕ್ಕೆ ತರುತ್ತದೆ
19. ಉದ್ಯಮಗಾರಿಕೆಯ ಗುಣಲಕ್ಷಣಗಳಾವುವು?
    - ಸೃಜನಾತ್ಮಕ
    - ತಂಡವನ್ನು ಕಟ್ಟುವುದು

- ಸಮಸ್ಯೆ ಪರಿಹಾರ
- ನಷ್ಟ ಭರಿಸಲು ಸಿದ್ದ
- ನಾಯಕತ್ವ
- ನಿರ್ಧಾರ ಕೈಗೊಳ್ಳುವುದು
- ಆತ್ಮವಿಶ್ವಾಸ

20. ಉದ್ಯಮಿಯ ಪ್ರಾಮುಖ್ಯತೆಯನ್ನು ವಿವರಿಸಿ
    - ಉದ್ಯಮಿಯು ದೇಶದ ನಿವ್ವಳ ಉತ್ಪನ್ನವನ್ನು ಹೆಚ್ಚಿಸುತ್ತಾರೆ
    - ವಿದೇಶಿ ವ್ಯಾಪಾರ ವೃದ್ಧಿಸಲು ಸಹಕಾರಿಯಾಗಿರುತ್ತಾರೆ
    - ದೇಶದ ಸಂಪನ್ಮೂಲ ಸದುಪಯೋಗವಾಗಲು ಕಾರಣರಾಗಿದ್ದಾರೆ
    - ಉಳಿತಾಯವನ್ನು ಬಂಡವಾಳವಾಗಿ ಪರಿವರ್ತಿಸಿ ಲಾಭ ಗಳಿಸಲು ಸಹಕರಿಸುತ್ತಾರೆ

## ಅಧ್ಯಾಯ–3
## ವ್ಯವಹಾರದ ಜಾಗತೀಕರಣ

**I** ಎರಡು ಅಂಕದ ಪ್ರಶ್ನೋತ್ತರಗಳು

1. ಜಾಗತೀಕರಣ ಎಂದರೇನು?
   ವಿಶ್ವದ ಅರ್ಥವ್ಯವಸ್ಥೆಯೊಂದಿಗೆ ಭಾರತದ ಅರ್ಥವ್ಯವಸ್ಥೆಯನ್ನು ಒಗ್ಗೂಡಿಸುವ ಪ್ರಕ್ರಿಯೆಯನ್ನು ಜಾಗತೀಕರಣ ಎನ್ನುವರು. ಇದು ಪ್ರಪಂಚದ ವಿವಿಧ ರಾಷ್ಟ್ರಗಳ ನಡುವೆ ನಡೆಯುವ ವ್ಯವಹಾರ ಸಂಬಂಧವಾಗಿದೆ.
2. ಜಾಗತೀಕರಣವು ವಿಶ್ವದಲ್ಲಿ ಆರ್ಥಿಕ ಚಲನೆಗೆ ಹೇಗೆ ಸಹಕಾರಿಯಾಗಿದೆ?
   - ಇದು ಆರ್ಥಿಕ ಪ್ರಗತಿಯನ್ನು ಹೆಚ್ಚಿಸುವುದಲ್ಲದೇ ವೈವಿಧ್ಯಮಯ ಸರಕು ಮತ್ತು ಸೇವೆಗಳನ್ನು ಒದಗಿಸುತ್ತದೆ
   - ದೇಶದ ಒಟ್ಟು ರಾಷ್ಟ್ರೀಯ ಉತ್ಪನ್ನವನ್ನು ಹೆಚ್ಚಿಸುತ್ತದೆ
   - ಜನರ ವರಮಾನವನ್ನು ಹೆಚ್ಚಿಸುತ್ತದೆ
   - ಉತ್ಪಾದನೆಯಲ್ಲಿ ವಿಶೇಷ ಪರಿಣತಿಗೆ ಅವಕಾಶ ನೀಡುತ್ತದೆ
3. ಜಾಗತೀಕರಣದ ಯಾವುದಾದರರೂ 4 ಮುಖ್ಯ ಲಕ್ಷಣಗಳನ್ನು ತಿಳಿಸಿ.
   - ಜಾಗತೀಕರಣವು ತೀವ್ರವಾಗಿ ಅಂತರರಾಷ್ಟ್ರೀಯ ವ್ಯಾಪಾರವನ್ನು ಹೆಚ್ಚಿಸುತ್ತದೆ.
   - ಅಂತರರಾಷ್ಟ್ರೀಯ ಸಾಂಸ್ಕೃತಿಕ ವಿನಿಮಯಗಳನ್ನು ಹೆಚ್ಚು ಮಾಡುತ್ತದೆ.
   - ದೇಶಗಳ ನಡುವೆ ವಲಸೆ ಹೋಗುವುದನ್ನು ಹೆಚ್ಚಿಸುತ್ತದೆ.
   - ಮಾಹಿತಿ ಮತ್ತು ತಾಂತ್ರಿಕತೆ ವಿನಿಮಯವಾಗುತ್ತದೆ.
4. ಜಾಗತೀಕರಣದ ನಾಲ್ಕು ಅನುಕೂಲತೆಗಳನ್ನು ತಿಳಿಸಿ / ಸಕಾರಾತ್ಮಕ ಪರಿಣಾಮಗಳನ್ನು ಬರೆಯಿರಿ.
   - ಜಾಗತೀಕರಣವು ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುತ್ತದೆ.
   - ಜಾಗತೀಕರಣ ಜನರ ಜೀವನ ಮಟ್ಟವನ್ನು ಹೆಚ್ಚಿಸುತ್ತದೆ.
   - ಜಾಗತೀಕರಣವು ದೇಶದ ವರಮಾನವನ್ನು ಹೆಚ್ಚಿಸುತ್ತದೆ.
   - ಜಾಗತೀಕರಣವು ದೇಶದ ರಾಷ್ಟ್ರೀಯ ಉತ್ಪನ್ನ (ಜಿ.ಡಿ.ಪಿ)ಹೆಚ್ಚಿಸುತ್ತದೆ.

5. ಜಾಗತೀಕರಣದ ನಾಲ್ಕು ನಕಾರಾತ್ಮಕ ಪರಿಣಾಮಗಳು / ಅನಾನುಕೂಲಗಳನ್ನು ಬರೆಯಿರಿ.
    - ಜಾಗತೀಕರಣ ಭಯೋತ್ಪಾದನೆ ಮತ್ತು ಪಾತಕಿಗಳಿಗೆ ಸಹಾಯವಾಗುತ್ತದೆ.
    - ಗುಲಾಮಗಿರಿ ಮತ್ತು ಬಾಲ ಕಾರ್ಮಿಕ ಪದ್ದತಿ ಉಂಟಾಗುವ ಸಾಧ್ಯತೆ ಇದೆ.
    - ಬೇರೆ ಬೇರೆ ರೋಗಗಳು ವಿಶ್ವಾದ್ಯಂತ ಹಬ್ಬುತ್ತದೆ.
    - ಜಾಗತೀಕರಣವು ಪರಿಸರದ ಅವನತಿಗೆ ಕಾರಣವಾಗುತ್ತದೆ.
6. ವಿಶ್ವ ವ್ಯಾಪಾರ ಸಂಘಟನೆಯು ಯಾವಾಗ ಸ್ಥಾಪನೆಯಾಯಿತು? ಒಟ್ಟು ಸದಸ್ಯ ರಾಷ್ಟ್ರಗಳ ಸಂಖ್ಯೆ ಎಷ್ಟು?
   ಕ್ರಿ.ಶ.1995 ರಲ್ಲಿ, ಸದಸ್ಯ ರಾಷ್ಟ್ರಗಳು 149

7. WTO ವಿಸ್ತರಿಸಿ? ಇದರ ಕೇಂದ್ರ ಕಚೇರಿ ಎಲ್ಲಿದೆ?
   ವಿಶ್ವ ವ್ಯಾಪಾರ ಸಂಘಟನೆ .ಇದರ ಕೇಂದ್ರ ಕಛೇರಿ ಸ್ವಿಟ್ಜರ್‌ಲ್ಯಾಂಡಿನ ಜಿನೇವಾದಲ್ಲಿದೆ.
8. ವಿಶ್ವ ವ್ಯಾಪಾರ ಸಂಘಟನೆಯ ಉದ್ದೇಶಗಲಾವುವು?
    - ವಿಶ್ವಾದ್ಯಂತ ಮುಕ್ತ ವ್ಯಾಪಾರಕ್ಕೆ ಒತ್ತು ನೀಡುವುದು
    - ವಿಶ್ವದ ವ್ಯಾಪಾರ ಸಂಬಂಧಿ ಭಿನ್ನಾಭಿಪ್ರಾಯಗಳನ್ನು ಬಗೆಹರಿಸುವುದು.
    - ಅಂತರಾಷ್ಟ್ರೀಯ ವ್ಯಾಪಾರದಲ್ಲಿ ತೆರಿಗೆಗಳನ್ನು ಕಡಿಮೆ ಮಾಡುವುದು.
    - ವಿಶ್ವದ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಳ್ಳುವುದು.
9. ಜಾಗತಿಕರಣವು ಪರಿಸರದ ಅವನತಿಗೆ ಹೇಗೆ ಕಾರಣವಾಗಿದೆ?
    - ಪರಿಸರ ಮಾಲಿನ್ಯ
    - ಹಸಿರು ಮನೆ ಪರಿಣಾಮ
    - ಜಾಗತಿಕ ತಾಪಮಾನದ ಏರಿಕೆ
    - ಸಂಪನ್ಮೂಲಗಳು ಬೇಗ ಅಂತ್ಯಗೊಳ್ಳುತ್ತವೆ.
10. ವಿಶ್ವ ವ್ಯಾಪಾರ ಸಂಘಟನೆಯ ಗುರಿಗಳಾವುವು?
    - ಸದಸ್ಯ ರಾಷ್ಟ್ರಗಳ ಜನರ ಜೀವನಮಟ್ಟ ಹೆಚ್ಚಿಸುವುದು.
    - ಸದಸ್ಯ ರಾಷ್ಟ್ರಗಳ ಆರ್ಥಿಕ ಮಟ್ಟವನ್ನು ಹೆಚ್ಚಿಸುವುದು.
    - ಉದ್ಯೋಗಾವಕಾಶಗಳನ್ನು ಕಲ್ಪಿಸುವುದು.
    - ಸದಸ್ಯ ರಾಷ್ಟ್ರಗಳಲ್ಲಿ ಶಾಂತಿ ಸ್ಥಿರತೆ ಕಾಪಾಡಲು ಸಹಕರಿಸುವುದು.

## ಅಧ್ಯಾಯ-4
## ಗ್ರಾಹಕರ ಶಿಕ್ಷಣ ಮತ್ತು ರಕ್ಷಣೆ

**I ಖಾಲಿ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ**

1. ಗ್ರಾಹಕನಿಗಿರುವ ಮತ್ತೊಂದು ಹೆಸರು **ಬಳಕೆದಾರ**
2. ಹಣ ಪಡೆದು ವಸ್ತು ಮತ್ತು ಸೇವೆಯನ್ನು ನೀಡುವಾತ **ಪೂರೈಕೆದಾರ**
3. ಪ್ರತೀ ವರ್ಷ ವಿಶ್ವ ಗ್ರಾಹಕ ದಿನವನ್ನು **ಮಾರ್ಚ್ 15** ರಂದು ಆಚರಿಸುತ್ತೇವೆ
4. ಪರಿಹಾರ ಮೊತ್ತವು 20 ಲಕ್ಷ ಮೀರಿದರೆ **ರಾಜ್ಯ ಗ್ರಾಹಕ** ಆಯೋಗಕ್ಕೆ ದೂರು ನೀಡಬೇಕು

**II ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ**

1. ಗ್ರಾಹಕ ಎಂದರೆ ಯಾರು?
   ನಿಗಧಿತ ಬೆಲೆಯನ್ನು ಪಾವತಿಸಿ ತನಗೆ ಬೇಕಾದ ಸರಕು ಸೇವೆಯನ್ನು ಖರೀದಿಸುವ, ಬಾಡಿಗೆಗೆ ಪಡೆಯುವ ವ್ಯಕ್ತಿಯೇ ಗ್ರಾಹಕ
2. ಗ್ರಾಹಕ ಆಂದೋಲನದ ಮೂಲ ಆಶಯ ಯಾವುದು?
   ಗ್ರಾಹಕರ ಹಿತರಕ್ಷಣೆ ಕಾಪಾಡುವುದೇ ಗ್ರಾಹಕ ಆಂದೋಲನದ ಮೂಲ ಆಶಯ
3. ಪ್ರತಿಯೊಬ್ಬ ಗ್ರಾಹಕನಿಗಿರುವ ಹಕ್ಕು ಯಾವುದು?
   ಗುಣಮಟ್ಟದ ಸರಕು ಮತ್ತು ಸೇವೆಯನ್ನು ಪಡೆಯುವುದು ಪ್ರತಿಯೊಬ್ಬ ಗ್ರಾಹಕನ ಹಕ್ಕಾಗಿದೆ
4. ಭಾರತದಲ್ಲಿ ಗ್ರಾಹಕ ಸಂರಕ್ಷಣಾ ಕಾಯಿದೆ ಯಾವಾಗ ಜಾರಿಗೆ ಬಂದಿತು?
   ಭಾರತದಲ್ಲಿ ಗ್ರಾಹಕ ಸಂರಕ್ಷಣಾ ಕಾಯಿದೆ 1986 ರಲ್ಲಿ ಜಾರಿಗೆ ಬಂದಿತು
5. ಜಿಲ್ಲಾ ಗ್ರಾಹಕ ನ್ಯಾಯಪೀಠದ ಅಧ್ಯಕ್ಷರನ್ನು ಯಾರು ನೇಮಿಸುತ್ತಾರೆ?
   ರಾಜ್ಯ ಸರ್ಕಾರವು ಜಿಲ್ಲಾ ಗ್ರಾಹಕ ನ್ಯಾಯಪೀಠದ ಅಧ್ಯಕ್ಷರನ್ನು ನೇಮಿಸುತ್ತದೆ

**III ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ**

1. ಗ್ರಾಹಕರು ಅನುಭವಿಸುತ್ತಿರುವ ಸಂಕಷ್ಟಗಳೇನು?
   - ಸರಕುಗಳಲ್ಲಿನ ಕಲಬೆರಕೆ
   - ಬೆಲೆ ಏರಿಕೆ
   - ತೂಕದಲ್ಲಿ ಮೋಸ
   - ಕಳಪೆ ಗುಣಮಟ್ಟದ ವಸ್ತುಗಳು
2. ಬಳಕೆದಾರರ ಶೋಷಣೆಗೆ ಕಾರಣಗಳಾವುವು
   - ಮಧ್ಯವರ್ತಿಗಳ ಪ್ರವೇಶ
   - ಅಧಿಕ ಲಾಭಬಡುಕುತನ
   - ಮಾರುಕಟ್ಟೆಯಲ್ಲಿ ಅನೈತಿಕ ವ್ಯಾಪಾರದ ವಿಧಾನಗಳು
3. ಗ್ರಾಹಕ ಸಂರಕ್ಷಣಾ ಕಾಯ್ದೆಯ ನಾಲ್ಕು ಮುಖ್ಯ ಉದ್ದೇಶಗಳನ್ನು ತಿಳಿಸಿ
   - ಅಪಾಯಕಾರಿ ವಸ್ತುಗಳ ಉತ್ಪಾದನೆ ಹಾಗೂ ಮಾರಾಟವನ್ನು ತಡೆಯುವುದು
   - ಮಾರುಕಟ್ಟೆಯಲ್ಲಿ ಅನೈತಿಕ ವ್ಯಾಪಾರದ ನಿಯಂತ್ರಣ
   - ಗುಣಮಟ್ಟದ ತೂಕ, ಅಳತೆ, ಬೆಲೆಗಳ ಮೇಲ್ವಿಚಾರಣೆ
   - ಗ್ರಾಹಕ ಹಿತರಕ್ಷಣೆಗೆ ಆದ್ಯತೆ
4. ಗ್ರಾಹಕ ಸಂರಕ್ಷಣಾ ಪರಿಷತ್ತಿನ ಮುಖ್ಯ ಕಾರ್ಯವೇನು?
   - ಮಾಹಿತಿ ಪಡೆಯುವ ಹಕ್ಕು
   - ವಸ್ತಗಳ ಆಯ್ಕೆಯ ಹಕ್ಕು
   - ವಸ್ತಗಳ ಬಗ್ಗೆ ಆಲಿಸುವ ಹಕ್ಕು
   - ಶೋಷಣೆಯ ವಿರುದ್ಧ ಪರಿಹಾರ ಕೇಳುವ ಹಕ್ಕು
   - ಗ್ರಾಹಕ ಶಿಕ್ಷಣದ ಹಕ್ಕು
5. ಮೂರು ಹಂತದ ಗ್ರಾಹಕ ನ್ಯಾಯಾಲಯಗಳನ್ನು ತಿಳಿಸಿ
   - ಜಿಲ್ಲಾ ಗ್ರಾಹಕ ವೇದಿಕೆ
   - ರಾಜ್ಯ ಗ್ರಾಹಕ ಆಯೋಗ
   - ರಾಷ್ಟ್ರೀಯ ಗ್ರಾಹಕ ಆಯೋಗ

6. ಗ್ರಾಹಕ ನ್ಯಾಯಾಲಯಕ್ಕೆ ಸಲ್ಲಿಸುವ ದೂರಿನಲ್ಲಿ ಇರಬೇಕಾದ ಮಾಹಿತಿಗಳಾವುವು?

- ಕೈ ಬರಹದ ದೂರಿನ ಅರ್ಜಿಯನ್ನು ಕೋರ್ಟಿಗೆ ಸಲ್ಲಿಸಬೇಕು
- ಅರ್ಜಿಯಲ್ಲಿ ವಿಳಾಸ ಮತ್ತು ದೂರವಾಣಿ ಸಂಖ್ಯೆ ಸ್ಪಷ್ಟವಾಗಿರಬೇಕು
- ನಷ್ಟ ಉಂಟುಮಾಡಿರುವ ಸರಕಿನ ವಿವರ, ಮೊತ್ತ ಸ್ಪಷ್ಟವಾಗಿರಬೇಕು
- ಖರೀದಿ ಬಿಲ್ಲನ್ನು ಲಗ್ಗತ್ತಿಸಸಿರಬೇಕು
- ವಕೀಲರ ಅವಶ್ಯಕತೆ ಇರುವುದಿಲ್ಲ
- ಗ್ರಾಹಕರೇ ನೇರವಾಗಿ ವಾದ ಮಂಡಿಸಬಹುದು